c. The revised estimates for the current year.

d. The estimates for the following year.

2. Money forming part of the funds of the Academy shall be deposited in the name of the academy in an account or accounts in a Nationalised Bank or invested in any Trust, securities or investments authorised by law and approved by the Academy. withdrawal these from shall only by cheques signed by such person or in such manner as the Academy may decide from time to time.

15. Audit

The Accounts of the Academy shall be audited annualy by the state accounts department or the Govt. and Accountant (General)

16. Reports

The Academy shall submit annually to the Goverrnment a report on the working of the Academy. Such report shall contain particulars regarding the work of the Academy during the previous year and a financial statement attached to it.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)ಮಾನ್ಯ ಅಧ್ಯಕ್ಷರೆ, ದಿನಾಂಕ 15-2-1994ರ ಲಿಖಿತ ಮೂಲಕ ಉತ್ತರಿಸುವ 6ನೇ ಪಟ್ಟಿಯಲ್ಲಿರುವ 365 358 161 153 354 209 ಪ್ರಶ್ನೆಗಳನ್ನು ಹೊರತುಪಡಿಸಿ ಬಾಕಿ 47 ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದಿಡುತ್ತೇನೆ.

ಭಾಷಾ ಅಲ್ಪಸಂಖ್ಯಾತರ ತಾಲ್ಲೂಕು.

374 - ಶ್ರೀ ಕೃಷ್ಣರಾವ್ ಮಡಗೇಕರ್ ದೇಸಾಯಿ (ಹಿರೇಬಾಗೇವಾಡಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?.

1. *ರಾಜ್ಯ ಸರ್ಕಾರವು ಭಾಷಾ ಅಲ್ಪಸಂಖ್ಯಾತರ ತಾಲ್ಲೂಕುಗಳೆಂದು ಘೋಷಿಸಿದೆಯೇ?*
2. *ಹಾಗಿದ್ದಲ್ಲಿ, ಭಾಷಾ ಅಲ್ಪಸಂಖ್ಯಾತರೊಂದಿಗೆ ಅದೇ ಭಾಷೆಯಲ್ಲಿ ಸರ್ಕಾರಿ ನೌಕರರು ವ್ಯವಹರಿಸುತ್ತಿದ್ದಾರೆಯೆ,*
3. *ಹಾಗಿದ್ದರೆ, ಅಂತಹ ಭಾಷಾ ಅಲ್ಪಸಂಖ್ಯಾತರಿರುವ ಸ್ಥಳಗಳಿಗೆ ಅರ್ಹತೆ ಹೊಂದಿದ ಅಧಿಕಾರಿಗಳು / ನೌಕರರು ತೈನಾತಿಸಲಾಗಿದೆಯೆ?*
4. *ರಾಜ್ಯಸರ್ಕಾರ ಮತ್ತು ಅಂತಹ ಭಾಷಾ ಅಲ್ಪಸಂಖ್ಯಾತರಿರುವ ಸಾರ್ವಜನಿಕರು ಇವರುಗಳ ಮಧ್ಯೆ ಯಾವ ರೀತಿ ಅಂತಹ ತಾಲ್ಲೂಕುಗಳಲ್ಲಿ ಸಂಬಂಧ ಕಲ್ಪಿಸಲಾಗಿದೆಯೆ?*

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು) :

ಅ) ಹೌದು

ಆ) ಶೇ. 15 ಕ್ಕಿಂತ ಹೆಚ್ಚಿಗೆ ಭಾಷಾ ಅಲ್ಪಸಂಖ್ಯಾಂತರಿರುವ ತಾಲ್ಲೂಕುಗಳಲ್ಲಿ

1.ಭಾಷಾ ಅಲ್ಪಸಂಖ್ಯಾತರಿಂದ ಸ್ವೀಕರಿಸಲ್ಪಡುವ ಅರ್ಜಿಗಳನ್ನು ಅವರು ಮಾತನಾಡುವ ಭಾಷೆಯಲ್ಲಿಯೇ ಸ್ವೀಕರಿಸುವುದಕ್ಕೆ ಮತ್ತು ಉತ್ತರವನ್ನು ಅದೇ ಭಾಷೆಯಲ್ಲಿಯೇ ಕೊಡುವುದಕ್ಕೆ

2. ಸರ್ಕಾರದ ಭಿತ್ತಿ ಪತ್ರಗಳು ಮತ್ತು ಪ್ರಚಾರ ಪತ್ರಗಳನ್ನು ಅಲ್ಪಸಂಖ್ಯಾಂತರ ಭಾಷೆಯಲ್ಲಿಯೇ ಹೊರಡಿಸಲು ಮತ್ತು

3. ಸರ್ಕಾರದಿಂದ ಹೊರಡಿಸುವ ಅಧಿಸೂಚನೆಗಳು ಆದೇಶಗಳು ಇತ್ಯಾದಿ. ರಾಜ್ಯ ಭಾಷೆಯ ಜೊತೆಗೆ ಅಲ್ಪಸಂಖ್ಯಾತರ ಭಾಷೆಯಲ್ಲಿಯೇ ಹೊರಡಿಸಬೇಕೆಂದು ದಿ: 19-3-93ರಂದು ಹೊರಡಿಸಿದ ಅಧಿಸೂಚನೆ ಸಂಖ್ಯೆ : ಡಿಪಿಎಆರ್ 223 ಕೆಒಎಲ್ 92 ರಲ್ಲಿ ಆದೇಶಿಸಲಾಗಿದೆ.

ಭಾಷಾ ಅಲ್ಪಸಂಖ್ಯಾತರುಗಳು ಇರುವ ಸ್ಥಳಗಳಿಗೆ ಆಯಾ ಭಾಷೆಗಳನ್ನು ಬಲ್ಲ ನೌಕರರನ್ನು/ ಅಧಿಕಾರಿಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ತೈನಾತಿಸಲಾಗುತ್ತದೆ.

2ನೇ ಉಪ ಪ್ರಶ್ನೆಗೆ ನೀಡಿರುವ ಉತ್ತರ ಇದಕ್ಕೂ ಹೊಂದುತ್ತದೆ.

ಹಸಿರು ಕಾರ್ಡಿನ ಫಲಾನುಭವಿಗಳ ಸಂಖ್ಯೆ

372 - ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?.

ಅ) ಬೀದರ್ ಜಿಲ್ಲೆಯಲ್ಲಿ ಹಸಿರು ಕಾರ್ಡು ಹೊಂದಿರುವ ಫಲಾನುಭವಿಗಳ ಸಂಖ್ಯೆ ಎಷ್ಟು (ತಾಲ್ಲೂಕುವಾರು ಅಂಕಿ ಅಂಶಗಳನ್ನು ನೀಡುವುದು)

ಆ) ಇನ್ನೂ ಎಷ್ಟು ಜನರು ಹಸಿರು ಕಾರ್ಡಿಗಾಗಿ ಅರ್ಜಿ ಸಲ್ಲಿಸಿದ್ದಾರೆ.

ಇ) ಅಲೆಮಾರಿ ಜನಾಂಗವಾದ ವಡ್ಡರು, ಕಾಡು ಕುರುಬರು, ಮುಂತಾದ ಜನರುಗಳಿಗೆ ಹಸಿರು ಕಾರ್ಡುಗಳನ್ನು ವಿತರಣೆ ಮಾಡಲು ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ?

ಶ್ರೀಮತಿ ಮನೋರಮ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

1,81,803 (ತ್ರಿವರ್ಣ)

ತಾಲ್ಲೂಕುವಾರು ಮಾಹಿತಿ ಈ ಕೆಳಗಿನಂತಿದೆ

ಔರಾದ್	35,209
ಬಸವಕಲ್ಯಾಣ	36,114
ಹುಮ್ನಾಬಾದ್	42,407
ಬಾಲ್ಕಿ	33,895
ಬೀದರ್	34,178
ಒಟ್ಟು	**1,81,803**

ಇಲ್ಲ.

ಹಸಿರು (ತ್ರಿವರ್ಣ)ಪಡಿತರ ಚೀಟಿಯನ್ನು ವಾರ್ಷಿಕ ಆದಾಯ ಮಿತಿ ರೂ. 6400ಗಳಿಂತ ಕಡಿಮೆ ಇದ್ದು, ಗ್ರಾಮಾಂತರ ಪ್ರದೇಶದಲ್ಲಿ 20,000 ಜನಸಂಖ್ಯೆಗಿಂತ ಕಡಿಮೆ ಇರುವ ಅರೆಪಟ್ಟಣ ಹಾಗೂ ನಗರ ಪ್ರದೇಶಗಳಲ್ಲಿ ಘೋಷಿತವಾದ ಕೊಳಚೆ ಪ್ರದೇಶಗಳಲ್ಲಿ ವಾಸಿಸುತ್ತಿರುವ ಜನಗಳಿಗೆ ನೀಡಲಾಗುವುದು. ಈ ಅರ್ಹತೆ ಹೊಂದಿದ ಎಲ್ಲಾ ವರ್ಗಗಳ ಜನರಿಗೂ ಈ ಕಾರ್ಡುಗಳನ್ನು ನೀಡಲಾಗುವುದು.

ರೋಗಗ್ರಸ್ತ ಕೈಗಾರಿಕೆಗಳಿಗೆ ಕೇಂದ್ರ ಸರ್ಕಾರದಿಂದ ನೆರವು.

371 - ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್) ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ರಾಜ್ಯಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?